# ಬದುಕು ಕಲಿಸುವ ಸಿನಿಮಾ

## ಭುವನ್ ಸತ್ಯ

ಝೀ ಕನ್ನಡದ 'ಬ್ರಹ್ಮಗಂಟು' ಚಿರಾಗ್



◆ **ಡಾನ್ಸ್ ಪ್ರೀತಿ ಹುಟ್ಟಿದ್ದು ಹೇಗೆ?**

8ನೇ ತರಗತಿಯಲ್ಲಿ ಇದ್ದಾಗ ಡಾನ್ಸ್ ಕ್ಲಾಸ್‌ಗೆ ಹಾಕಿದ್ದರು. ಎರಡು ವರ್ಷ ಕಲಿಯುವಷ್ಟರಲ್ಲಿ 10ನೇ ತರಗತಿ ಎಂದು ಬಿಡಿಸಿದರು. ನಾನು ಮಾತ್ರ ಶಾಲೆಯ ವಾರ್ಷಿಕೋತ್ಸವದಲ್ಲಿ ಡಾನ್ಸ್ ಮಾಡುತ್ತಿದ್ದೆ. ಬಹುತೇಕರು ಹಿಂದಿ ಸೇರಿದಂತೆ ಅನ್ಯ ಭಾಷೆಯ ಸಿನಿಮಾ ಹಾಡುಗಳಿಗೆ ಹೆಚ್ಚು ಆದ್ಯತೆ ಕೊಡುತ್ತಿದ್ದರು. ಅದಕ್ಕೆ ಬದಲಾಗಿ ನಾನು ಕನ್ನಡದ ಸಿನಿಮಾ ಹಾಡುಗಳಿಗೆ ಕೊರಿಯೋಗ್ರಫಿ ಮಾಡುತ್ತಿದ್ದೆ. ಆಗಲೇ ಕೊರಿಯೋಗ್ರಫಿ ಅಭ್ಯಾಸ ಆರಂಭವಾಯಿತು. ಅದು ಕಾಲೇಜು ದಿನಗಳಲ್ಲಿಯೂ ಮುಂದುವರಿಯಿತು. ಅದಕ್ಕಾಗಿಯೇ ಯೂಟ್ಯೂಬ್ ಚಾನಲ್ ಕೂಡ ಆರಂಭಿಸಿದೆವು. 'ವಿವೇಕ ವಿಜಯ' ಎನ್ನುವ ನಾಟಕಕ್ಕೆ ನನ್ನ ಗೆಳೆಯ ಆಹ್ವಾನಿಸಿದ. 'ನೃತ್ಯಪಟುವಿನ ಅಂತರಾಳದಲ್ಲಿ ನಟನೊಬ್ಬ ಅಡಗಿರುತ್ತಾನೆ' ಎನ್ನುವ ಮಾತಿನಂತೆ ನಾನು ನಟನಾದೆ. ಅದಕ್ಕಿಂತ ಮೊದಲು ಶಾಲೆಗಳಲ್ಲಿ ಮಾಡುತ್ತಿದ್ದ ರೂಪಕಗಳಲ್ಲಿ ಅಭಿನಯಿಸಿದ್ದೆ.

◆ **ಸಿನಿಮಾ ಏಕೆ ನೋಡಬೇಕು ಎಂದರೆ, ನೀವು ಏನು ಹೇಳುತ್ತೀರಿ?**

ಅದಕ್ಕೆ ನನಗಂತೂ ಆಳವಾದ ಕಾರಣಗಳು ಇವೆ. ಸಿನಿಮಾ ಜೀವನದಲ್ಲಿ ನನ್ನ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಬಹುಪಾಲು ನೆರವು ನೀಡಿದೆ. ಭಾಷಾ ಅಭಿಮಾನ, ನೈತಿಕ ಶಕ್ತಿಯನ್ನು ನನಗೆ ಕೊಟ್ಟಿದ್ದು ಸಿನಿಮಾ. ಒಬ್ಬ ವ್ಯಕ್ತಿ ಸ್ವಯಂ ಅನುಭವದಿಂದಲೇ ಎಲ್ಲವನ್ನೂ ಕಲಿಯಲು ಸಾಧ್ಯ ಇಲ್ಲ. ಬೇರೆಯವರ ಸರಿ ತಪ್ಪುಗಳನ್ನು ನೋಡಿಯೂ ಕಲಿಯಬೇಕು. ಸಿನಿಮಾ ಎನ್ನುವುದು ಬೇರೆಬೇರೆ ಜೀವನ ಕ್ರಮವನ್ನು ಬಿಂಬಿಸುತ್ತದೆ. ಅದು ಒಬ್ಬರ ಸರಿ ತಪ್ಪುಗಳನ್ನೂ ತೋರಿಸುತ್ತದೆ. ನನ್ನ ಬದುಕನ್ನು ರೂಪಿಸಿಕೊಳ್ಳಲು ಸಿನಿಮಾ ದೊಡ್ಡ ಪಾತ್ರವನ್ನು ನಿರ್ವಹಿಸಿದೆ. ಒಳ್ಳೆಯದನ್ನು ರೂಢಿಸಿಕೊಳ್ಳಲು, ನಮ್ಮನ್ನು ನಾವು ರೂಪಿಸಿಕೊಳ್ಳಲು ಸಿನಿಮಾ ಸಹಕಾರಿ ಆಗಬೇಕು. ಆ ನಿಟ್ಟಿನಲ್ಲಿ ಸಿನಿಮಾ ನೋಡಬೇಕು ಎಂದು ಅನ್ನಿಸುತ್ತದೆ.

◆ **ಚಿರಾಗ್ ಪಾತ್ರವನ್ನು ನೀವು ಹೇಗೆ ನೋಡುತ್ತಿದ್ದೀರಿ?**

ನಟನೆ ಎಂದಾಗ ಪಾತ್ರವನ್ನು ಆ ಪಾತ್ರದಂತೆ ಮಾಡಬೇಕು. ಪಾತ್ರದ ವಿವರವನ್ನು ತಿಳಿದು ಮಾಡುತ್ತಿದ್ದೇನೆ. ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಪಾತ್ರ ಚಿರಾಗ್. ತಾಯಿ ಪ್ರೀತಿ ಇಲ್ಲದೆ ಬೆಳೆಯುತ್ತಿರುತ್ತಾನೆ. ಆದರೆ ಅವನ ನಿರೀಕ್ಷೆಯಂತೆ ತಂದೆಯ ಪ್ರೀತಿ ಕೂಡ ಸಿಗುವುದಿಲ್ಲ. ಒಳ್ಳೆಯ ಗುಣಗಳನ್ನು ರೂಢಿಸಿಕೊಂಡು ಬೆಳೆದಿದ್ದಾನೆ. ಅತ್ತಿಗೆಯ ಮಾತುಗಳನ್ನು ಕೇಳುತ್ತಿದ್ದಾನೆ. ಅವರೇ ಅವನಿಗೆ ಸರ್ವಸ್ವ. ಆಕೆ ಸರಿ ಹೇಳಿದರು, ತಪ್ಪು ಹೇಳಿದರೂ ಅದೇ ಅವನಿಗೆ ಅಂತಿಮ.

◆ **ನಿಮ್ಮ ಜೀವನದಲ್ಲಿ ಬಣ್ಣದ ಪಾತ್ರ ಏನು?**

ಇದು ಆಗಬೇಕು ಎಂದು ನಾನು ಯಾವ ಕೆಲಸವನ್ನು ಮಾಡಿಲ್ಲ. ನನ್ನ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುವಲ್ಲಿ ಸಿನಿಮಾ ದೊಡ್ಡ ಪಾತ್ರವಿದೆ ಅಂದಮೇಲೆ ಅದಕ್ಕೆ ನಾನೇನು ಕೊಡುತ್ತೇನೆ ಎಂದು ಕೆಲಸ ಮಾಡುತ್ತಾ ಬಂದಿದ್ದೇನೆ. ಪಾತ್ರದ ಬಗ್ಗೆಯೇ ಹೇಳುವುದಾದರೆ ಅನೇಕ ಸಂದರ್ಭದಲ್ಲಿ ನಮ್ಮ ಅನೇಕ ಭಾವನೆಗಳನ್ನು ನಮ್ಮ ಜೀವನದಲ್ಲಿ ಪ್ರಕಟಿಸುವುದೇ ಇಲ್ಲ. ಬೇರೆ ಪಾತ್ರದ ಮೂಲಕ ಆ ಭಾವನೆಗಳನ್ನು ಅನುಭವಿಸಬಹುದು. ಅಂತಹ ಅಪರೂಪದ ಭಾವನೆಗಳನ್ನು ಹೊರಹೊಮ್ಮಿಸಬಹುದು. ಇದು ಅದ್ಭುತ ಕಲೆ. ನಾನು ಇಲ್ಲಿ ಏನು ಕೊಡಬಹುದು ಎಂದು ಯೋಚಿಸುತ್ತಿದ್ದೇನೆ.

◆ **ನಟನ ಜನಪ್ರಿಯತೆ ನಿಮ್ಮಲ್ಲಿ ಏನೆಲ್ಲ ಬದಲಾವಣೆ ತಂದಿದೆ?**

ಜೀವನದಲ್ಲಿ ಖಂಡಿತ ಒಂದಿಷ್ಟು ಬದಲಾವಣೆ ಆಗಿದೆ. ಅದನ್ನು ಹೆಚ್ಚಾಗಿ ಗಮನಿಸಲು ಹೋಗಿಲ್ಲ. ಶಾಲೆಯ ದಿನಗಳಲ್ಲಿಯೇ ಕೊರಿಯೋಗ್ರಫಿ ಮಾಡುತ್ತಿದ್ದರಿಂದ ಆಗಾಗ ಅಂತಹ ಸಣ್ಣ ಅನುಭವ ನೋಡಿದ್ದೇನೆ. ಆಗಲೇ ನಾನು ಆ ಕಡೆ ಗಮನ ಕೊಡಬಾರದು ಎನ್ನುವುದನ್ನೂ ಕಲಿತಿದ್ದೇನೆ. ಹಾಗಾಗಿ ನನ್ನ ಜೀವನದಲ್ಲಿ ಅಥವಾ ಸಮಾಜದಲ್ಲಿ ಏನಾಯಿತು ಎನ್ನುವ ಬಗ್ಗೆ ನೋಡುವುದಿಲ್ಲ. ಈಗಲೂ ಶಾಲಾ ದಿನಗಳಲ್ಲಿ ಇದ್ದ ಮನಸ್ಥಿತಿಯೇ ಇದೆ. ಆದರೂ ರಾಜ್ಯಮಟ್ಟದಲ್ಲಿ ನನ್ನನ್ನು ಗುರುತಿಸುತ್ತಾರೆ. ಜನಮನ್ನಣೆ ಇದೆ ಎನ್ನುವುದು ನಿಜ.

◆ **ಇದರ ಜೊತೆ ಇನ್ನೇನು ಮಾಡುತ್ತೀರಿ?**

ಕನ್ನಡ ಹಾಡುಗಳಿಗೆ ಕೊರಿಯೋಗ್ರಫಿ ಮಾಡುವ ಸಂಬಂಧ ಡಾನ್ಸ್ ಪ್ಯಾಶನ್ ಬೆಳೆಯಿತು. ಅದರಿಂದ ಎಡಿಟಿಂಗ್, ನಿರ್ದೇಶನ ಕಲಿತೆ. ಸಿನಿಮಾ ಕೇಂದ್ರೀಕರಿಸಿಯೇ ನನ್ನ ಹವ್ಯಾಸ ವೃದ್ಧಿಯಾಗಿದೆ. ನನಗೆ ಆಸಕ್ತಿ ಅಂತ ಬಂದರೆ ನಟನೆ, ನೃತ್ಯ, ಎಡಿಟಿಂಗ್... ಸಿನಿಮಾ ನಿರ್ಮಾಣಕ್ಕೆ ಬೇಕಾದ ಕೌಶಲ ಕಲಿಯುವುದೇ ಆಗಿದೆ. ಸ್ಕ್ರಿಪ್ಟ್ ನಾಟಕಗಳಿಗೆ ಬರೆದಿದ್ದೇನೆ. ಚಿತ್ರಕಥೆಯನ್ನೂ ಸ್ವಲ್ಪ ಮಟ್ಟಿಗೆ ಮಾಡಿದ್ದೇನೆ. ಇನ್ನೂ ಕಲಿಯುವುದು ತುಂಬ ಇದೆ ಎಂದುಕೊಂಡಿದ್ದೇನೆ.

■ ರಾಘವೇಂದ್ರ ಕೆ.